# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | WEDNESDAY | 6-7-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಗೋಡಂಬಿ ತಿರುಳು ದೇಶೀ ಬಳಕೆ ಹೆಚ್ಚಳ

ಕೋವಿಡ್ 19 ರ ನಂತರ ದೇಶೀ ಮಾರುಕಟ್ಟೆಯಲ್ಲಿ ಗೋಡಂಬಿ ತಿರುಳು ಬಳಕೆ ಹೆಚ್ಚಳವಾಗಿದೆಯೆನ್ನಲಾಗಿದ್ದು, ದೇಶೀ ಬೇಡಿಕೆ ಉತ್ತಮ ಗ್ರೇಡ್‌ಗೆ ಬೇಡಿಕೆ ಉತ್ತಮ ಗ್ರೇಡ್‌ನದಕ್ಕಿಂತ ಸಾಮಾನ್ಯ ಗ್ರೇಡ್‌ಗೆ ಬೇಡಿಕೆ ಹೆಚ್ಚಳವೆನ್ನಲಾಗಿದ್ದು, ಇದರ ದರ ಉತ್ತಮ ಗ್ರೇಡ್‌ಗಿಂತ ಕಡಿಮೆಯಿದ್ದು, ಜನರು ಕಡಿಮೆ ಬೆಲೆಯ ಗೋಡಂಬಿ ತಿರುಳು ಖರೀದಿ ಮಾಡುತ್ತಿದ್ದಾರೆನ್ನಲಾಗಿದೆ. ಇದರಿಂದ ಸಾಮಾನ್ಯ ದರ್ಜೆಯದಕ್ಕಿಂತ ಹೆಚ್ಚಿನ ಬೇಡಿಕೆಯಿದೆಯೆನ್ನಲಾಗಿದೆ. ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚಳದಿಂದಾಗಿ ದೇಶದಲ್ಲಿ ಗೋಡಂಬಿ ಬಳಕೆಯೂ ಹೆಚ್ಚಳವಾಗಿದೆಯೆನ್ನಲಾಗಿದ್ದು, ಗೋಡಂಬಿ ತಿರುಳು ಉತ್ಪಾದಿಸುವ ಇತರ ದೇಶಗಳಲ್ಲಿ ದೇಶೀ ಬಳಕೆ ಹೆಚ್ಚಳವಿರುವುದು ಉತ್ಪಾದಕರಿಗೆ ಹೆಚ್ಚಿನ ಗುಣಾತ್ಮಕ ಅಂಶವಾಗಿದೆ. ದೇಶದ ಬೇಡಿಕೆಗನುಗುಣವಾಗಿ ಕಚ್ಚಾ ಗೋಡಂಬಿ ದೇಶದಲ್ಲಿ ಉತ್ಪಾದನೆಯಾಗದಿರುವುದರಿಂದ, ಉತ್ಪಾದಿಸುವ ಗೋಡಂಬಿ ತಿರುಳಿಗೆ ಆಮದು ಕಚ್ಚಾ ಬೀಜವನ್ನು ಅವಲಂವಬಿಸುವಂತಾಗಿದೆ ಹಾಗೂ ಭಾರತದಲ್ಲಿ ಉತ್ಪಾದನೆಯಾಗುವಷ್ಟೇ ಕಚ್ಚಾ ಗೋಡಂಬಿ ಹೆಚ್ಚುವರಿ ಆಮದು ಮಾಡಬೇಕಾಗುತ್ತದೆಯೆನ್ನಲಾಗಿದೆ. ಉತ್ತಮ ದರ್ಜೆಯ ಗೋಡಂಬಿ ತಿರುಳಿನ ದೇಶೀ ಬೇಡಿಕೆ ಇಳಿಕೆಯಿಂದ ಅದರ ದರವೂ ಇಳಿಕೆಯಾಗಿದೆ. ಮುಂದಿನ ತಿಂಗಳಿನಿಂದ ಗೋಡಂಬಿ ತಿರುಳಿಗೆ ಬೇಡಿಕೆ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿರುವುದರಿಂದ ದರವೂ ಹೆಚ್ಚಳ ಸಾಧ್ಯತೆಯಿದೆ.

## 2022–23 ರಲ್ಲಿ ಭಾರತ ಕಾಫಿ ಉತ್ಪಾದನೆ 3.93 ಲಕ್ಷ ಟನ್‌ಗಳ ನಿರೀಕ್ಷೆ

ಕಾಫಿ ಬೋರ್ಡ್ ಮುಂಚಿತ ಅಂದಾಜಿನಂತೆ ಭಾರತದಲ್ಲಿ 2022–23 ರ ಕಾಫಿ ಉತ್ಪಾದನೆ 3.93 ಲಕ್ಷ ಟನ್‌ಗಳಾಗಬಹುದೆನ್ನಲಾಗಿದೆ. ಇದರಲ್ಲಿ 1.169 ಲಕ್ಷ ಟನ್ ಅರೆಬಿಕಾ ಕಾಫಿ( ಹಿಂದಿನ ವರ್ಷ 95000 ಟನ್‌ಗಳು) ರಾಬೆಸ್ಟಾ ಕಾಫಿ ಉತ್ಪಾದನೆ 2.71 ಲಕ್ಷ ಟನ್‌ಳಾಗಬಹುದೆನ್ನಲಾಗಿದೆ. (ಹಿಂದಿನ ವರ್ಷದ ಉತ್ಪಾದನೆ 2.47 ಲಕ್ಷ ಟನ್‌ಗಳು) ಈ ವರ್ಷ ಉತ್ತಮ ಮುಂಗಾರು ಪೂರ್ವ ಮಳೆ ಹಾಗೂ ಪೂರಕ ಹವಾಮಾನದಿಂದ ಬೆಳೆ ಹೆಚ್ಚಳವಾಗಬಹುದೆನ್ನಲಾಗಿದೆ. ಅಕ್ಟೋಬರ್ ತಿಂಗಳ ತನಕ ಹವಾಮಾನ ಪೂರಕವಾಗಿ ಉತ್ತಮವಾಗಿದ್ದರೆ ಈ ಅಂದಾಜಿನಂತೆ ಉತ್ಪಾದನೆಯಾಗಬಹುದೆನ್ನಲಾಗಿದೆ. ಇದರಲ್ಲಿ ಕರ್ನಾಟಕದ ಉತ್ಪಾದನೆ ಹಿಂದಿನ ವರ್ಷಕ್ಕಿಂತ 18 ಶೇಕಡಾ, ತಮಿಳುನಾಡಿನ ಉತ್ಪಾದನೆ 11 ಶೇಕಡಾ ಹಾಗೂ ಕೇರಳದಲ್ಲಿ 6.3 ಶೇಕಡಾ ಹೆಚ್ಚಳವಾಗಬಹುದೆನ್ನಲಾಗಿದೆ. ಜಾಗತಿಕ ಉತ್ಪಾದನೆಯೂ ಮುಂದಿನ ವರ್ಷ ಹೆಚ್ಚಳವಾಗುವ ಅಂದಾಜಿದ್ದು ದರ ಮುಂದಿನ ವರ್ಷ ಇಳಿಕೆಯಾಗುವ ಸಾಧ್ಯತೆಯಿದೆ.

## 9 ತಿಂಗಳ ಕನಿಷ್ಠ ಮಟ್ಟಕ್ಕಿಳಿದ ಪಾಮೆಣ್ಣೆ ದರ

ಇಂಡೋನೇಶಿಯಾದಿಂದ ಪಾಮೆಣ್ಣೆ ರಫ್ತು ಹೆಚ್ಚಳದ ನಿರೀಕ್ಷೆಯಿಂದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 9 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆ. ಮಲೇಶಿಯನ್ ಪಾಮೆಣ್ಣೆ ರಫ್ತು ಜೂನ್ ತಿಂಗಳಲ್ಲಿ 7.4 ಶೇಕಡಾ ಹಿನ್ನಡೆಯಾಗಿದ್ದು, ಇಂಡೋನೇಶಿಯಾದ ರಫ್ತು ಕೋಟಾ ಹೆಚ್ಚಳ ದರದ ಮೇಲೆ ಪ್ರಭಾವ ಬೀರಿದೆಯೆನ್ನಲಾಗಿದೆ. ಇದರೊಂದಿಗೆ ಪರ್ಯಾಯ ಸ್ಪರ್ಧಿ ಖಾದ್ಯ ತೈಲಗಳ ದರ ಇಳಿಕೆಯೂ ಪಾಮೆಣ್ಣೆ ದರ ಇಳಿಕೆಗೆ ಕಾರಣವಾಗಿದೆ. ಪಾಮೆಣ್ಣೆ ದರ ಇಳಿಕೆಯಿಂದ ದೇಶೀ ಮಾರುಕಟ್ಟೆಯಲ್ಲಿ ಇತರ ಖಾದ್ಯತೈಲ ದರ ಇಳಿಕೆಗೆ ಕಾರಣವಾಗುವ ಸಾಧ್ಯತೆಯಿದೆ.

## ದಾವಣಗೆರೆ ಜೋಳ ದರ ಹೆಚ್ಚಳ

ಬಿಹಾರದ ಮಾರುಕಟ್ಟೆಯಲ್ಲಿ ಜೋಳ ದರ ಸ್ಥಿರವಾಗಿದ್ದು, ದಾವಣಗೆರೆಯಲ್ಲಿ ಫೀಡ್ಸ್ ತಯಾರಕರಿಂದ ಹಾಗೂ ಕಾರ್ಖಾನೆಗಳಿಂದ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳ ಮುಂದುವರಿದಿದೆಯೆನ್ನಲಾಗಿದೆ. ದೇಶೀ ಮಾರುಕಟ್ಟೆಯಲ್ಲಿ ದೊಡ್ಡ ಮಟ್ಟದ ಖರೀದಿದಾರರಿಂದ ಬೇಡಿಕೆ ಹೆಚ್ಚಳದ ಹಿನ್ನಲೆಯಲ್ಲಿ ಗೋಧಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಬೇಳೆಕಾಳು ಬಿತ್ತನೆ ಪ್ರಗತಿ

ಮುಂಗಾರು ಬಿರುಸುಗೊಂಡಂತೆ ಬೇಳೆಕಾಳು ಬಿತ್ತನೆಯಲ್ಲಿ ಪ್ರಗತಿಯಾಗುತ್ತಿದೆಯೆನ್ನಲಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದಾಗ ಈ ವರ್ಷ ಹೆಸರುಕಾಳು ಬಿತ್ತನೆ ವಿಸ್ತೀರ್ಣ ಹೆಚ್ಚಳವಾಗಿದೆಯೆನ್ನಲಾಗಿದ್ದು, ಉದ್ದು ಹಾಗೂ ತೊಗರಿ ಬಿತ್ತನೆ ವಿಸ್ತೀರ್ಣ ಇನ್ನೂ ಹಿಂದಿನ ವರ್ಷಕ್ಕಿಂತ ಕಡಿಮೆಯಿದೆಯೆನ್ನಲಾಗಿದೆ.

## ದೇಶೀ ಮಾರುಕಟ್ಟೆಗೆ ಜುಲೈ ತಿಂಗಳ ಸಕ್ಕರೆ ಕೋಟಾ 21 ಲಕ್ಷ ಟನ್‌ಗಳು

ಜುಲೈ ತಿಂಗಳಿಗೆ ದೇಶೀ ಮಾರುಕಟ್ಟೆಯ ಮಾರಾಟ ಕೋಟಾ 21 ಲಕ್ಷ ಟನ್‌ಗಳಿಗೆ ನಿಗದಿಯಾಗಿದೆಯೆನ್ನಲಾಗಿದೆ. ಇದು ಹಿಂದಿನ ವರ್ಷದ ಜುಲೈ ತಿಂಗಳ ಕೋಟಾ ಕ್ಕಿಂತ 1 ಲಕ್ಷ ಟನ್ ಕಡಿಮೆಯಾಗಿದೆಯೆನ್ನಲಾಗಿದೆ. ತಿಂಗಳ ದೇಶೀ ಬೇಡಿಕೆ 22–23 ಲಕ್ಷ ಟನ್‌ಗಳು ಎನ್ನಲಾಗಿದೆ. ಮಾರುಕಟ್ಟೆ ದರ ಸ್ಥಿರವಿದೆಯೆನ್ನಲಾಗಿದೆ.